THE TIMES OF INDIA, MANGALURU
SATURDAY, AUGUST 28, 2021

# Rare surgery performed on kids

TIMES NEWS NETWORK

**Manipal:** The department of paediatric surgery at Kasturba Medical College and Hospital, Manipal, successfully performed a complex and rare oesophagus duplication surgery on two paediatric patients.

The doctors had two cases of oesophageal duplication in an 11-month-old girl, and an 11-year-old girl. The infant presented with recurrent respiratory infections and difficulty in breathing. The 11-year-old patient presented with a recent change in voice, breathlessness in lying down position, and swelling in neck.

Dr Vijay Kumar, professor, and head of paediatric surgery, and his colleagues, could remove this duplication of the oesophagus by opening the neck and thorax (chest) of the patient. Dr Aravind Bishnoi, a cardiothoracic surgeon, helped intraoperatively in one patient. Both patients recovered completely after surgery.

ಪ್ರಜಾವಾಣಿ

ಶನಿವಾರ • ಆಗಸ್ಟ್ 28, 2021

ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಅಪರೂಪದ ಶಸ್ತ್ರಚಿಕಿತ್ಸೆ

# ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಉಡುಪಿ: ಇಬ್ಬರು ಮಕ್ಕಳಲ್ಲಿ ಕಾಣಿಸಿಕೊಂಡಿದ್ದ ಅಪರೂಪದ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆ ಈಚೆಗೆ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಎರಡು ಅನ್ನನಾಳಗಳ ಸಮಸ್ಯೆ ಕಾಣಿಸಿಕೊಳ್ಳುವುದು ಅಪರೂಪ. ಅದರಲ್ಲೂ ಕೊಳವೆಯಾಕಾರದ ಜೋಡಿ ಅನ್ನನಾಳಗಳು ತೀರಾ ಅಪರೂಪ. ಹುಟ್ಟಿನಿಂದಲೇ ಎರಡು ಅನ್ನನಾಳಗಳು ಇದ್ದರೂ ಬಾಲ್ಯದಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದು ಕಡಿಮೆ. ವಯಸ್ಕರಾಗುತ್ತಿದ್ದಂತೆ ರೋಗ ಲಕ್ಷಣಗಳು ಕಂಡು ಬರುತ್ತವೆ. ರೋಗಿಗಳಿಗೆ ಆಹಾರ ನುಂಗಲೂ ಕಷ್ಟವಾಗಬಹುದು, ಉಸಿರಾಟದ ತೊಂದರೆ, ಎದೆನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ,

**ಮುಖ್ಯಾಂಶಗಳು**

- ಕುತ್ತಿಗೆ ಮತ್ತು ಎದೆಯ ಭಾಗದಲ್ಲಿ ಶಸ್ತ್ರ ಚಿಕಿತ್ಸೆ
- ಹೆಚ್ಚುವರಿ ಅನ್ನನಾಳ ತೆಗೆದು ಹಾಕಿದ ವೈದ್ಯರು
- ಚೇತರಿಸಿಕೊಂಡಿರುವ ಇಬ್ಬರು ಮಕ್ಕಳು

ವಾಂತಿ, ಕೆಮ್ಮು, ರಕ್ತಸ್ರಾವ ಹಾಗೂ ಹೆಮೆಟಮೆಸಿಸ್ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಸಮಸ್ಯೆಗಳು ಕಾಣಿಸಿಕೊಂಡಾಗ ಶಸ್ತ್ರಚಿಕಿತ್ಸೆಯಿಂದ ಅನ್ನನಾಳಗಳನ್ನು ತೆಗೆಯುವುದು ಅವಶ್ಯ ಎನ್ನುತ್ತಾರೆ ಕೆಎಂಸಿ ಆಸ್ಪತ್ರೆಯ ವೈದ್ಯರು.

ಮಣಿಪಾಲ ಆಸ್ಪತ್ರೆಯ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಈಚೆಗೆ 11 ತಿಂಗಳ ಮಗು ಹಾಗೂ 11 ವರ್ಷದ ಬಾಲಕಿಯಲ್ಲಿ ಜೋಡಿ ಅನ್ನನಾಳಗಳು ಇರುವುದು ಪತ್ತೆಯಾಗಿತ್ತು. ಮಗುವಿಗೆ ಉಸಿರಾಟದ ಸೋಂಕು ಹಾಗೂ ತೊಂದರೆ ಇದ್ದರೆ, ಬಾಲಕಿಗೆ ಧ್ವನಿ ಬದಲಾವಣೆ, ಉಸಿರಾಟದ ತೊಂದರೆ ಹಾಗೂ ಕುತ್ತಿಗೆಯಲ್ಲಿ ಊತ ಕಾಣಿಸಿಕೊಂಡಿತ್ತು.

ಎಕ್ಸ್-ರೇ; ಸಿಟಿ ಸ್ಕ್ಯಾನ್ ಮತ್ತು ಎಂಡೊಸ್ಕೋಪಿಕ್ ಮಾಡಿದಾಗಲೂ 11 ವರ್ಷದ ಬಾಲಕಿಯಲ್ಲಿ ಜೋಡಿ ಅನ್ನನಾಳ ಪತ್ತೆಯಾಗಿರಲಿಲ್ಲ. ಶಸ್ತ್ರ ಚಿಕಿತ್ಸೆ ಮಾಡುವಾಗ ಜೋಡಿ ಅನ್ನನಾಳ ಪತ್ತೆಯಾಯಿತು. ತಕ್ಷಣ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಡಾ.ವಿಜಯಕುಮಾರ್ ಹಾಗೂ ಡಾ.ಸಂತೋಷ್ ಪ್ರಭು, ಡಾ.ಸಂದೀಪ್, ಡಾ.ಹರ್ಷ ಆಚಾರ್ಯ, ಡಾ.ರಂಜನಿ ಒಳಗೊಂಡ ತಂಡ ಬಾಲಕಿಯ ಕುತ್ತಿಗೆ ಮತ್ತು ಎದೆಯ ಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದು ಹಾಕಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಅವಿನಾಶ್ ಶೆಟ್ಟಿ ತಿಳಿಸಿದರು.

ಹೃದಯ ಶಸ್ತ್ರ ಚಿಕಿತ್ಸಾ ತಜ್ಞ ಡಾ.ಅರವಿಂದ ಬಿಷ್ಣೋಯಿ, ಅರಿವಳಿಕೆ ತಜ್ಞ ಡಾ.ಅಜಿತ್ ಸಹಕರಿಸಿದರು. ಶಸ್ತ್ರಚಿಕಿತ್ಸೆಯ ನಂತರ ಇಬ್ಬರು ಮಕ್ಕಳು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಜೋಡಿ ಅನ್ನನಾಳಗಳನ್ನು ಪತ್ತೆಹಚ್ಚಲು ಉನ್ನತ ಮಟ್ಟದ ತಪಾಸಣೆ ಅಗತ್ಯವಿರುತ್ತದೆ. ಸರಿಯಾದ ಸಮಯಕ್ಕೆ ಶಸ್ತ್ರಚಿಕಿತ್ಸೆ ಮಾಡದಿದ್ದರೆ ರೋಗಿಗಳಿಗೆ ತೊಂದರೆಯಾಗುತ್ತದೆ. ಸಕಾಲಿಕ ರೋಗ ನಿರ್ಣಯ ಮಾಡುವ ಮೂಲಕ ಅಂಗರಚನಾ ಶಾಸ್ತ್ರದ ತಿಳಿವಳಿಕೆ ಹೊಂದಿರುವ ತಜ್ಞ ವೈದ್ಯರಿಂದ ಶಸ್ತ್ರಚಿಕಿತ್ಸೆ ಮಾಡಿಸುವುದು ಬಹಳ ಮುಖ್ಯ ಎನ್ನುತ್ತಾರೆ ಡಾ. ವಿಜಯ್ ಕುಮಾರ್.

ವಿಜಯವಾಣಿ

VIJAYAVANI » MANGALURU
ಶನಿವಾರ 28 ಆಗಸ್ಟ್ 2021
28 AUGUST 2021

# ಮಕ್ಕಳ ಜೋಡಿ ಅನ್ನನಾಳ ಶಸ್ತ್ರಚಿಕಿತ್ಸೆ

ಉಡುಪಿ: ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗದ ತಜ್ಞ ವೈದ್ಯರು ಇಬ್ಬರು ಮಕ್ಕಳಲ್ಲಿ ಕಂಡುಬಂದಿದ್ದ ಸಂಕೀರ್ಣ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಓರ್ವನಲ್ಲಿ ಎರಡು ಅನ್ನನಾಳಗಳು ಕಂಡುಬರುವುದು ಅತ್ಯಂತ ಅಪೂರ್ವ ಮತ್ತು ಜನ್ಮಜಾತ ಭ್ರೂಣದ ವಿರೂಪ. ನುಂಗಲು ಕಷ್ಟ, ಉಸಿರಾಟದ ತೊಂದರೆ, ಎದೆ ನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ, ವಾಂತಿ, ಸ್ಟ್ರಿಡರ್, ಕೆಮ್ಮು, ರಕ್ತಸ್ರಾವ, ಮತ್ತು ಹೆಮೆಟಮೆಸಿಸ್ ಮುಂತಾದ ತೊಂದರೆಗಳು ಪತ್ತೆಯಾಗಬಹುದು. ವೈದ್ಯರ ಪ್ರಕಾರ, ಶಸ್ತ್ರಚಿಕಿತ್ಸೆಯೇ ಇದಕ್ಕೆ ಇರುವ ಏಕೈಕ ಪರಿಹಾರ.

**» ಮಣಿಪಾಲ ಕೆಎಂಸಿ ವೈದ್ಯರ ಸಾಧನೆ**

ಮಣಿಪಾಲ ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ಇತ್ತೀಚೆಗೆ ಇಂತಹ ಜೋಡಿ ಅನ್ನನಾಳ ಇರುವ 2 ಪ್ರಕರಣ ಕಂಡುಬಂದಿದ್ದವು. ಒಂದು 11 ತಿಂಗಳ ಮಗು, ಇನ್ನೊಂದು 11ವರ್ಷದ ಹುಡುಗಿ. ಮಗುವಿಗೆ ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿತ್ತು. 11 ವರ್ಷದ ಮಗುವಿಗೆ ಇತ್ತೀಚೆಗೆ ಧ್ವನಿ ಬದಲಾವಣೆ, ಮಲಗಿದಾಗ ಉಸಿರಾಟ ತೊಂದರೆ, ಕುತ್ತಿಗೆಯಲ್ಲಿ ಊತ ಕಂಡುಬಂದಿತ್ತು. ರೋಗಿಗಳನ್ನು ಎಕ್ಸ್-ರೇ, ಸಿ.ಟಿ.ಸ್ಕ್ಯಾನ್ ಮತ್ತು ಎಂಡೋಸ್ಕೋಪಿಕ್ ಮೌಲ್ಯಮಾಪನ ಮೂಲಕ ಪರೀಕ್ಷಿಸಲಾಗಿತ್ತು. ಶಸ್ತ್ರಚಿಕಿತ್ಸೆ ನಂತರ ಇಬ್ಬರೂ ರೋಗಿಗಳು ಸಂಪೂರ್ಣ ಚೇತರಿಸಿಕೊಂಡಿದ್ದಾರೆ. ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗ ಮುಖ್ಯಸ್ಥ ಡಾ.ವಿಜಯಕುಮಾರ್, ಡಾ.ಸಂತೋಷ್ ಪ್ರಭು, ಡಾ.ಸಂದೀಪ್ ಪಿ.ಟಿ, ಡಾ.ಹರ್ಷ ಆಚಾರ್ಯ, ಡಾ.ರಂಜನಿ ತಂಡ ಕುತ್ತಿಗೆ ಮತ್ತು ಎದೆಯಭಾಗದಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದಿದ್ದಾರೆ. ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ.ಅರವಿಂದ ಬಿಷ್ಣೋಯಿ, ಮಕ್ಕಳ ಅರಿವಳಿಕೆ ತಜ್ಞ ಡಾ.ಅಜಿತ್ ಶಸ್ತ್ರಚಿಕಿತ್ಸೆಯಲ್ಲಿ ಸಹಕರಿಸಿದ್ದಾರೆ.

**The Canara Post**

**27th August 2021**

# Kasturba Hospital performs rare surgery on Duplication of Oesophagus

**Manipal, Aug 27, 2021:** Department of Pediatric Surgery at Kasturba Medical College and Hospital– Manipal successfully performed a complex and rare Oesophagus duplications surgery on two pediatrics patients.

According to the doctors, Oesophageal duplications are exceedingly rare congenital embryonal malformations. Tubular types of duplications is still a rarer form of oesophageal duplication.

Though the lesions are since birth, symptoms are rarely seen in childhood, but more symptomatic in adults. It may result in difficulty in swallowing, breathing difficulty, chest pain, epigastric discomfort, vomiting, stridor, cough, bleeding, and hematemesis or may be incidentally detected.



Because of varied presentations, diagnosis is often difficult or delayed. The only option of managing these conditions is the surgical removal of the duplications.

KMC's Dept. of Paediatric Surgery had 2 cases of oesophageal duplication. While the one was an 11-month baby, the other one was an 11-year girl.

The 11-month baby faced recurrent respiratory infections and difficulty in breathing. The other child had a change in voice and also suffered from neck swelling and faced breathlessness in lying down position.

The patients were evaluated with x-ray, CT scan, and endoscopy. Even after a complete evaluation, it was not able to diagnose the duplication in the 11-year patient. It was a surprise to see complete duplication of the oesophagus during surgery.

Dr. Vijay Kumar, Professor, and Head of Paediatric surgery with his team of doctors Dr. Santhosh Prabhu, Dr. Sundeep PT, Dr. Harsha Acharya, and Dr. Ranjani, removed this duplication of the oesophagus by opening the neck and thorax(chest) of the patient.

Dr. Aravind Bishnoi, a cardiothoracic surgeon helped intraoperatively in one patient. Pediatric anesthetist Dr. Ajith gave anesthesia support. Both patients have recovered completely after surgery.

“These anomalies are extremely rare problems in children and may have different presentations at different age groups. Diagnosis may be difficult in some cases, even after a complete evaluation, as we had in one case here,” Dr. Vijay Kumar said.

A high level of suspicion in diagnosis is important. If not operated in time, it can lead to various complications increasing morbidity.

So timely diagnosis, understanding the correct anatomy before the major surgery and a good infrastructure with a team of experts is important in managing these extremely rare problems in children.

Dr. Avinash Shetty, Medical Superintendent congratulated the Pediatric Surgery team.

“This kind of complex surgery was successfully undertaken at Kasturba Hospital, Manipal due to the team of expert doctors. This gives new hopes to the pediatric patients of coastal and middle Karnataka”

DAIJIWORLD

27th August 2021

# ಉಡುಪಿ: ಮಕ್ಕಳಲ್ಲಿ ಕಂಡುಬಂದಿದ್ದ ಜೋಡಿ ಅನ್ನನಾಳದ ಅಪರೂಪದ ಶಸ್ತ್ರಚಿಕಿತ್ಸೆ ಯಶಸ್ವ

**ಉಡುಪಿ, ಆ.27 (DaijiworldNews/HR):** ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗವು ಎರಡು ಮಕ್ಕಳಲ್ಲಿ ಕಂಡುಬಂದಿದ್ದ ಸಂಕೀರ್ಣ ಮತ್ತು ಅಪರೂಪದ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿತು.




- ಒಬ್ಬರಲ್ಲಿ ಎರಡು ಅನ್ನನಾಳಗಳು ಕಂಡುಬರುವುದು ಅತ್ಯಂತ ಅಪರೂಪದ ಜನ್ಮಜಾತ ಭ್ರೂಣದ ವಿರೂಪಗಳು. ಅದರಲ್ಲೂ ಕೊಳವೆಯಾಕಾರದ ಭಾಗದ ಈ ಜೋಡಿ ಅನ್ನನಾಳಗಳು ತೀರ ಅಪರೂಪವಾಗಿದೆ. ಹುಟ್ಟಿನಿಂದಲೇ ಇವುಗಳು ಇದ್ದರೂ, ಬಾಲ್ಯದಲ್ಲಿ ರೋಗಲಕ್ಷಣಗಳು ವಿರಳವಾಗಿ ಕಂಡುಬರುತ್ತವೆ, ಆದರೆ ವಯಸ್ಕರಲ್ಲಿ ಹೆಚ್ಚು ರೋಗಲಕ್ಷಣಗಳು ಕಂಡುಬರುತ್ತವೆ. ಅವರಿಗೆ ನುಂಗಲು ಕಷ್ಟವಾಗಬಹುದು, ಉಸಿರಾಟದ ತೊಂದರೆ, ಎದೆ ನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ, ವಾಂತಿ, ಸ್ಟ್ರಿಡರ್, ಕೆಮ್ಮು, ರಕ್ತಸ್ರಾವ, ಮತ್ತು ಹೆಮೆಟಮೆಸಿಸ್ ಅಥವಾ ಪ್ರಾಸಂಗಿಕನಂತಹ ತೊಂದರೆಗಳು ಪತ್ತೆಯಾಗಬಹುದು. ವಿಭಿನ್ನ ಪ್ರಸ್ತುತಿಗಳಿಂದಾಗಿ, ರೋಗನಿರ್ಣಯವು ಸಾಮಾನ್ಯವಾಗಿ ಕಷ್ಟ ಅಥವಾ ವಿಳಂಬವಾಗುತ್ತದೆ. ಈ ಪರಿಸ್ಥಿತಿಗಳನ್ನು ನಿರ್ವಹಿಸುವ ಏಕೈಕ ಆಯ್ಕೆಯೆಂದರೆ ಹೆಚ್ಚಿನದನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯುವುದು.

ಮಣಿಪಾಲ ಮಕ್ಕಳ ಶಸ್ತ್ರಚಿಕಿತ್ಸೆಯ ವಿಭಾಗದಲ್ಲಿ ಇತ್ತೀಚೆಗೆ ಇಂತಹ ಜೋಡಿ ಅನ್ನನಾಳ ಇರುವ 2 ಪ್ರಕರಣಗಳು ಕಂಡುಬಂದವು. ಒಂದು 11 ತಿಂಗಳ ಮಗು, ಮತ್ತು ಇನ್ನೊಂದು 11 ವರ್ಷದ ಹುಡುಗಿ. 11 ತಿಂಗಳ ಮಗುವಿಗೆ ಮರುಕಳಿಸುವ ಉಸಿರಾಟದ ಸೋಂಕುಗಳು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿತ್ತು. 11 ವರ್ಷದ ಮಗುವಿಗೆ ಇತ್ತೀಚೆಗೆ ಧ್ವನಿಯ ಬದಲಾವಣೆ, ಮಲಗಿರುವ ಸ್ಥಿತಿಯಲ್ಲಿ ಉಸಿರಾಟದ ತೊಂದರೆ ಮತ್ತು ಕುತ್ತಿಗೆಯಲ್ಲಿ ಊತದಂತಹ ಲಕ್ಷಣ ಕಂಡುಬಂದಿತ್ತು. ರೋಗಿಗಳನ್ನು ಎಕ್ಸ್-ರೇ, ಸಿಟಿ ಸ್ಕ್ಯಾನ್ ಮತ್ತು

ಎಂಡೋಸ್ಕೋಪಿಕ್ ಮೌಲ್ಯಮಾಪನದ ಮೂಲಕ ಮೌಲ್ಯಮಾಪನ ಮಾಡಲಾಯಿತು. ಸಂಪೂರ್ಣ ಮೌಲ್ಯಮಾಪನದ ನಂತರವೂ, 11 ವರ್ಷದ ರೋಗಿಯಲ್ಲಿನ ಜೋಡಿ ಅನ್ನನಾಳವನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಜೋಡಿ ಅನ್ನನಾಳವನ್ನು ಕಂಡು ಆಶ್ಚರ್ಯವಾಯಿತು.

ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಜಯಕುಮಾರ್ ಮತ್ತು ಅವರ ತಂಡದ ಡಾ.ಸಂತೋಷ್ ಪ್ರಭು, ಡಾ.ಸಂದೀಪ್ ಪಿ ಟಿ, ಡಾ.ಹರ್ಷ ಆಚಾರ್ಯ, ಮತ್ತು ಡಾ.ರಂಜನಿಯವರ ತಂಡ, ಕುತ್ತಿಗೆ ಮತ್ತು ಎದೆಯಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದರ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದು ಹಾಕಿದರು. ಹೃದಯ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ. ಅರವಿಂದ ಬಿಷ್ಣೋಯಿ, ಒಂದು ರೋಗಿಗೆ ಇಂಟ್ರಾಆಪರೇಟಿವ್ ಆಗಿ ಸಹಾಯ ಮಾಡಿದರು. ಮಕ್ಕಳ ಅರಿವಳಿಕೆ ತಜ್ಞ ಡಾ.ಅಜಿತ್ ಅರಿವಳಿಕೆ ನೀಡಿದರು. ಶಸ್ತ್ರಚಿಕಿತ್ಸೆಯ ನಂತರ ಇಬ್ಬರೂ ರೋಗಿಗಳು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ.

ಈ ಕುರಿತು ಮಾತನಾಡಿದ ಡಾ. ವಿಜಯ್ ಕುಮಾರ್, "ಇಂತಹ ವೈಪರೀತ್ಯಗಳು ಮಕ್ಕಳಲ್ಲಿ ಅತ್ಯಂತ ಅಪರೂಪದ ಸಮಸ್ಯೆಗಳು ಮತ್ತು ವಿವಿಧ ವಯಸ್ಸಿನವರಲ್ಲಿ ವಿಭಿನ್ನ ಪ್ರಸ್ತುತಿಗಳನ್ನು ಹೊಂದಿರಬಹುದು. ಸಂಪೂರ್ಣ ಮೌಲ್ಯಮಾಪನದ ನಂತರವೂ ಕೆಲವು ಸಂದರ್ಭಗಳಲ್ಲಿ ರೋಗನಿರ್ಣಯವು ಕಷ್ಟವಾಗಬಹುದು. ಆದ್ದರಿಂದ ರೋಗನಿರ್ಣಯದಲ್ಲಿ ಉನ್ನತ ಮಟ್ಟದ ತಪಾಸಣೆ ಮುಖ್ಯವಾಗಿದೆ. ಸರಿಯಾದ ಸಮಯದಲ್ಲಿ ಶಸ್ತ್ರ ಚಿಕಿತ್ಸೆ ನಡೆಸದಿದ್ದರೆ, ಇದು ವಿವಿಧ ತೊಡಕುಗಳಿಗೆ ಕಾರಣವಾಗಿ ಬೇರೆ ರೀತಿಯ ತೊಂದರೆಗಳು ಕಾಣಿಸಬಹುದು. ಆದ್ದರಿಂದ ಸಕಾಲಿಕ ರೋಗನಿರ್ಣಯ, ಪ್ರಮುಖ ಶಸ್ತ್ರಚಿಕಿತ್ಸೆಗೆ ಮುನ್ನ ಸರಿಯಾದ ಅಂಗರಚನಾಶಾಸ್ತ್ರದ ತಿಳುವಳಿಕೆ ಮತ್ತು ತಜ್ಞರ ತಂಡದೊಂದಿಗೆ ಉತ್ತಮ ಮೂಲಸೌಕರ್ಯವು ಮಕ್ಕಳಲ್ಲಿನ ಈ ಅತ್ಯಂತ ಅಪರೂಪದ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಮುಖ್ಯವಾಗಿದೆ" ಎಂದರು.

ಡಾ. ಅವಿನಾಶ ಶೆಟ್ಟಿ ಮಾತನಾಡಿ, "ಅಪರೂಪದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಮಕ್ಕಳ ಶಸ್ತ್ರಚಿಕಿತ್ಸಾ ತಂಡವನ್ನು ಅಭಿನಂದಿಸಿದರು ಮತ್ತು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಈ ರೀತಿಯ ಸಂಕೀರ್ಣ ಶಸ್ತ್ರಚಿಕಿತ್ಸೆಯು ತಜ್ಞ ವೈದ್ಯರ ತಂಡದಿಂದ ಸಾಧ್ಯವಾಗುತ್ತಿದೆ. ಇದು ಕರಾವಳಿ ಮತ್ತು ಮಧ್ಯ ಕರ್ನಾಟಕದ ಮಕ್ಕಳ ರೋಗಿಗಳಿಗೆ ಹೊಸ ಭರವಸೆಯನ್ನು ನೀಡಲಿದೆ" ಎಂದು ಹೇಳಿದರು.

**DAIJIWORLD**

**27th August 2021**

# Udupi: KMCH Manipal successfully performs two complex, rare oesophagus duplications surgeries

**Udupi, Aug 27:** Department of Pediatric Surgery at Kasturba Medical College and Hospital, Manipal successfully performed complex and rare oesophagus duplications surgery on two pediatrics patients.

Oesophageal duplications are exceedingly rare congenital embryonal malformations. Out of these tubular types of duplications is still a rarer form of oesophageal duplication. Though the lesions are since birth, symptoms are rarely seen in childhood, but more symptomatic in adults. They may present with difficulty in swallowing, breathing difficulty, chest pain, epigastric discomfort, vomiting, stridor, cough, bleeding, and hematemesis or may be incidentally detected. Because of varied presentations, diagnosis is often difficult or delayed. The only option of managing these conditions is the surgical removal of the duplications.

Department of Paediatric Surgery, KMC, Manipal had two cases of oesophageal duplication, 11-month baby, and an 11-year girl. The 11-month baby presented with recurrent respiratory infections and difficulty in breathing. The 11-year patient presented with a recent change in voice, breathlessness in lying down position, and neck swelling. The patients were evaluated with x-ray, CT scan, and endoscopic evaluation. Even after a complete evaluation, it was not able to diagnose the duplication in the 11-year patient. It was a surprise to see complete duplication of the oesophagus during surgery.

Dr Vijay Kumar, professor, and head of Paediatric surgery with his team of doctors Dr Santhosh Prabhu, Dr Sundeep PT, Dr Harsha Acharya, and Dr Ranjani, could remove this duplication of the oesophagus by opening the neck and thorax(chest) of the patient. Dr Aravind Bishnoi, a cardiothoracic surgeon helped intraoperatively in one patient. Pediatric anesthetist Dr Ajith gave anesthesia support. Both patients recovered completely after surgery.

Dr Vijay Kumar says, these anomalies are extremely rare problems in children and may have different presentations at different age groups. Diagnosis may be difficult in some cases, even after a complete evaluation, as we had in one case here. A high level of suspicion in diagnosis is important. If not operated in time, it can give rise to different complications, and morbidity in these patients may increase. So timely diagnosis, understanding the correct anatomy before the major surgery and a good infrastructure with a team of experts is important in managing these extremely rare problems in children.

Dr Avinash Shetty, medical superintendent congratulated the Pediatric Surgery team and said that "this kind of complex surgery was possible at Kasturba Hospital, Manipal due to the team of expert doctors. With this, it gives new hopes to the pediatric patients of coastal and middle Karnataka.

Namma UDUPI BULLETIN

27th August 2021

# ಕೆ.ಎಂ.ಸಿ ಮಣಿಪಾಲ: ಜೋಡಿ ಅನ್ನನಾಳದ ಅಪರೂಪದ ಶಸ್ತ್ರಚಿಕಿತ್ಸೆ



**ಮಣಿಪಾಲ:** ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗವು ಎರಡು ಮಕ್ಕಳಲ್ಲಿ ಕಂಡುಬಂದಿದ್ದ ಸಂಕೀರ್ಣ ಮತ್ತು ಅಪರೂಪದ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿತು.

ಒಬ್ಬರಲ್ಲಿ ಎರಡು ಅನ್ನನಾಳಗಳು ಕಂಡುಬರುವುದು ಅತ್ಯಂತ ಅಪರೂಪದ ಜನ್ಮಜಾತ ಭ್ರೂಣದ ವಿರೂಪಗಳು. ಅದರಲ್ಲೂ ಕೊಳವೆಯಾಕಾರದ ಭಾಗದ ಈ ಜೋಡಿ ಅನ್ನನಾಳಗಳು ತೀರ ಅಪರೂಪವಾಗಿದೆ. ಹುಟ್ಟಿನಿಂದಲೇ ಇವುಗಳು ಇದ್ದರೂ, ಬಾಲ್ಯದಲ್ಲಿ ರೋಗಲಕ್ಷಣಗಳು ವಿರಳವಾಗಿ ಕಂಡುಬರುತ್ತವೆ, ಆದರೆ ವಯಸ್ಕರಲ್ಲಿ ಹೆಚ್ಚು ರೋಗಲಕ್ಷಣಗಳು ಕಂಡುಬರುತ್ತವೆ. ಅವರಿಗೆ ನುಂಗಲು ಕಷ್ಟವಾಗಬಹುದು, ಉಸಿರಾಟದ ತೊಂದರೆ, ಎದೆ ನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ, ವಾಂತಿ, ಸ್ಟ್ರಿಡರ್, ಕೆಮ್ಮು, ರಕ್ತಸ್ರಾವ, ಮತ್ತು ಹೆಮೆಟಮೆಸಿಸ್ ಅಥವಾ ಪ್ರಾಸಂಗಿಕನಂತಹ ತೊಂದರೆಗಳು ಪತ್ತೆಯಾಗಬಹುದು. ವಿಭಿನ್ನ ಪ್ರಸ್ತುತಿಗಳಿಂದಾಗಿ, ರೋಗ ನಿರ್ಣಯವು ಸಾಮಾನ್ಯವಾಗಿ ಕಷ್ಟ ಅಥವಾ ವಿಳಂಬವಾಗುತ್ತದೆ. ಈ ಪರಿಸ್ಥಿತಿಗಳನ್ನು ನಿರ್ವಹಿಸುವ ಏಕೈಕ ಆಯ್ಕೆಯೆಂದರೆ ಹೆಚ್ಚಿನದನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯುವುದು.

ಮಣಿಪಾಲ ಮಕ್ಕಳ ಶಸ್ತ್ರಚಿಕಿತ್ಸೆಯ ವಿಭಾಗದಲ್ಲಿ ಇತ್ತೀಚೆಗೆ ಇಂತಹ ಜೋಡಿ ಅನ್ನನಾಳ ಇರುವ 2 ಪ್ರಕರಣಗಳು ಕಂಡುಬಂದವು. ಒಂದು 11 ತಿಂಗಳ ಮಗು, ಮತ್ತು ಇನ್ನೊಂದು 11 ವರ್ಷದ ಹುಡುಗಿ. 11 ತಿಂಗಳ ಮಗುವಿಗೆ ಮರುಕಳಿಸುವ ಉಸಿರಾಟದ ಸೋಂಕುಗಳು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿತ್ತು. 11 ವರ್ಷದ ಮಗುವಿಗೆ ಇತ್ತೀಚೆಗೆ ಧ್ವನಿಯ ಬದಲಾವಣೆ, ಮಲಗಿರುವ ಸ್ಥಿತಿಯಲ್ಲಿ ಉಸಿರಾಟದ ತೊಂದರೆ ಮತ್ತು ಕುತ್ತಿಗೆಯಲ್ಲಿ ಊತದಂತಹ ಲಕ್ಷಣ ಕಂಡುಬಂದಿತ್ತು. ರೋಗಿಗಳನ್ನು ಎಕ್ಸ್-ರೇ, ಸಿಟಿ ಸ್ಕ್ಯಾನ್ ಮತ್ತು ಎಂಡೋಸ್ಕೋಪಿಕ್ ಮೌಲ್ಯಮಾಪನದ ಮೂಲಕ ಮೌಲ್ಯಮಾಪನ ಮಾಡಲಾಯಿತು. ಸಂಪೂರ್ಣ ಮೌಲ್ಯಮಾಪನದ ನಂತರವೂ, 11 ವರ್ಷದ ರೋಗಿಯಲ್ಲಿನ ಜೋಡಿ ಅನ್ನನಾಳವನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಜೋಡಿ ಅನ್ನನಾಳವನ್ನು ಕಂಡು ಆಶ್ಚರ್ಯವಾಯಿತು.

ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಜಯಕುಮಾರ್ ಮತ್ತು ಅವರ ತಂಡದ ಡಾ.ಸಂತೋಷ್ ಪ್ರಭು, ಡಾ.ಸಂದೀಪ್ ಪಿ ಟಿ, ಡಾ.ಹರ್ಷ ಆಚಾರ್ಯ ಮತ್ತು ಡಾ.ರಂಜನಿಯವರ ತಂಡ, ಕುತ್ತಿಗೆ ಮತ್ತು ಎದೆಯಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದರ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದು ಹಾಕಿದರು. ಹೃದಯ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ. ಅರವಿಂದ ಬಿಷ್ಣೋಯಿ, ಒಂದು ರೋಗಿಗೆ ಇಂಟ್ರಾಆಪರೇಟಿವ್ ಆಗಿ ಸಹಾಯ ಮಾಡಿದರು. ಮಕ್ಕಳ ಅರಿವಳಿಕೆ ತಜ್ಞ ಡಾ.ಅಜಿತ್ ಅರಿವಳಿಕೆ ನೀಡಿದರು. ಶಸ್ತ್ರಚಿಕಿತ್ಸೆಯ ನಂತರ ಇಬ್ಬರೂ ರೋಗಿಗಳು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ.

ಇಂತಹ ವೈಪರೀತ್ಯಗಳು ಮಕ್ಕಳಲ್ಲಿ ಅತ್ಯಂತ ಅಪರೂಪದ ಸಮಸ್ಯೆಗಳು ಮತ್ತು ವಿವಿಧ ವಯಸ್ಸಿನವರಲ್ಲಿ ವಿಭಿನ್ನ ಪ್ರಸ್ತುತಿಗಳನ್ನು ಹೊಂದಿರಬಹುದು. ಸಂಪೂರ್ಣ ಮೌಲ್ಯಮಾಪನದ ನಂತರವೂ ಕೆಲವು ಸಂದರ್ಭಗಳಲ್ಲಿ ರೋಗನಿರ್ಣಯವು ಕಷ್ಟವಾಗಬಹುದು. ಆದ್ದರಿಂದ ರೋಗನಿರ್ಣಯದಲ್ಲಿ ಉನ್ನತ ಮಟ್ಟದ ತಪಾಸಣೆ ಮುಖ್ಯವಾಗಿದೆ. ಸರಿಯಾದ ಸಮಯದಲ್ಲಿ ಶಸ್ತ್ರ ಚಿಕಿತ್ಸೆ ನಡೆಸದಿದ್ದರೆ, ಇದು ವಿವಿಧ ತೊಡಕುಗಳಿಗೆ ಕಾರಣವಾಗಿ ಬೇರೆ ರೀತಿಯ ತೊಂದರೆಗಳು ಕಾಣಿಸಬಹುದು. ಆದ್ದರಿಂದ ಸಕಾಲಿಕ ರೋಗನಿರ್ಣಯ, ಪ್ರಮುಖ ಶಸ್ತ್ರಚಿಕಿತ್ಸೆಗೆ ಮುನ್ನ ಸರಿಯಾದ ಅಂಗರಚನಾಶಾಸ್ತ್ರದ ತಿಳುವಳಿಕೆ ಮತ್ತು ತಜ್ಞರ ತಂಡದೊಂದಿಗೆ ಉತ್ತಮ ಮೂಲಸೌಕರ್ಯವು ಮಕ್ಕಳಲ್ಲಿನ ಈ ಅತ್ಯಂತ ಅಪರೂಪದ ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಮುಖ್ಯವಾಗಿದೆ ಎಂದು ಡಾ. ವಿಜಯ್ ಕುಮಾರ್ ಹೇಳಿದರು.

ವೈದ್ಯಕೀಯ ಅಧೀಕ್ಷಕರಾದ ಡಾ. ಅವಿನಾಶ ಶೆಟ್ಟಿಯವರು ಅಪರೂಪದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಮಕ್ಕಳ ಶಸ್ತ್ರಚಿಕಿತ್ಸಾ ತಂಡವನ್ನು ಅಭಿನಂದಿಸಿ, ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಈ ರೀತಿಯ ಸಂಕೀರ್ಣ ಶಸ್ತ್ರಚಿಕಿತ್ಸೆಯು ತಜ್ಞ ವೈದ್ಯರ ತಂಡದಿಂದ ಸಾಧ್ಯವಾಗುತ್ತಿದೆ. ಇದು ಕರಾವಳಿ ಮತ್ತು ಮಧ್ಯ ಕರ್ನಾಟಕದ ಮಕ್ಕಳ ರೋಗಿಗಳಿಗೆ ಹೊಸ ಭರವಸೆಯನ್ನು ನೀಡಲಿದೆ ಎಂದು ಹೇಳಿದರು.

UDUPI BULLETIN

**27th August 2021**

# Rare surgery on duplication of Oesophagus



**Manipal:** Department of Pediatric Surgery at Kasturba Medical College and Hospital, Manipal Successfully performed complex and rare Oesophagus duplications surgery on two pediatrics patients.

Oesophageal duplications are exceedingly rare congenital embryonal malformations. Out of these Tubular types of duplications is still a rarer form of oesophageal duplication. Though the lesions are since birth, symptoms are rarely seen in childhood, but more symptomatic in adults. They may present with difficulty in swallowing, breathing difficulty, chest pain, epigastric discomfort, vomiting, stridor, cough, bleeding, and hematemesis or may be incidentally detected. Because of varied presentations, diagnosis is often difficult or delayed. The only option of managing these conditions is the surgical removal of the duplications.

Dept. of Paediatric Surgery, KMC, Manipal had 2 cases of oesophageal duplication, 11-month baby, and an 11-year girl. The 11-month baby presented with recurrent respiratory infections and difficulty in breathing. The 11-year patient presented with a recent change in voice, breathlessness in lying down position, and neck swelling. The patients were evaluated with x-ray, CT scan, and endoscopic evaluation. Even after a complete evaluation, it was not able to diagnose the duplication in the 11-year patient. It was a surprise to see complete duplication of the oesophagus during surgery.

Dr. Vijay Kumar, Professor, and Head of Paediatric surgery with his team of doctors Dr. Santhosh Prabhu, Dr. Sundeep PT, Dr. Harsha Acharya, and Dr. Ranjani, could remove this duplication of the oesophagus by opening the neck and thorax(chest) of the patient. Dr. Aravind Bishnoi, a cardiothoracic surgeon helped intraoperatively in one patient. Pediatric anesthetist Dr. Ajith gave anesthesia support. Both patients recovered completely after surgery.

Dr. Vijay Kumar says, these anomalies are extremely rare problems in children and may have different presentations at different age groups. Diagnosis may be difficult in some cases, even after a complete evaluation, as we had in one case here. A high level of suspicion in diagnosis is important. If not operated in time, it can give rise to different complications, and morbidity in these patients may increase. So timely diagnosis, understanding the correct anatomy before the major surgery and a good infrastructure with a team of experts is important in managing these extremely rare problems in children.

Dr. Avinash Shetty, Medical Superintendent congratulated the Pediatric Surgery team and said that this kind of complex surgery was possible at Kasturba Hospital, Manipal due to the team of expert doctors. With this, it gives new hopes to the pediatric patients of coastal and middle Karnataka.

PublicNext

27th August 2021

# ಉಡುಪಿ: ಮಕ್ಕಳಲ್ಲಿ ಕಂಡುಬಂದಿದ್ದ ಜೋಡಿ ಅನ್ನನಾಳದ ಅಪರೂಪದ ಶಸ್ತ್ರಚಿಕಿತ್ಸೆ ನಡೆಸಿದ ಕೆಎಂಸಿ

ಮಣಿಪಾಲ:ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗವು ಎರಡು ಮಕ್ಕಳಲ್ಲಿ ಕಂಡುಬಂದಿದ್ದ ಸಂಕೀರ್ಣ ಮತ್ತು ಅಪರೂಪದ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿತು.

ಒಬ್ಬರಲ್ಲಿ ಎರಡು ಅನ್ನನಾಳಗಳು ಕಂಡುಬರುವುದು ಅತ್ಯಂತ ಅಪರೂಪದ ಜನ್ಮಜಾತ ಭ್ರೂಣದ ವಿರೂಪಗಳು. ಅದರಲ್ಲೂ ಕೊಳವೆಯಾಕಾರದ ಭಾಗದ ಈ ಜೋಡಿ ಅನ್ನನಾಳಗಳು ತೀರ ಅಪರೂಪವಾಗಿದೆ. ಅಂಥವರಿಗೆ ನುಂಗಲು ಕಷ್ಟವಾಗಬಹುದು, ಉಸಿರಾಟದ ತೊಂದರೆ, ಎದೆ ನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ, ವಾಂತಿ, ಸ್ಟ್ರಿಡರ್, ಕೆಮ್ಮು, ರಕ್ತಸ್ರಾವ, ಮತ್ತು ಹೆಮೆಟಮೆಸಿಸ್ ಅಥವಾ ಪ್ರಾಸಂಗಿಕನಂತಹ ತೊಂದರೆಗಳು ಪತ್ತೆಯಾಗಬಹುದು.

ಈ ಪರಿಸ್ಥಿತಿಗಳನ್ನು ನಿರ್ವಹಿಸುವ ಏಕೈಕ ಆಯ್ಕೆಯೆಂದರೆ ಹೆಚ್ಚಿನದನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯುವುದು.

ಮಣಿಪಾಲ ಮಕ್ಕಳ ಶಸ್ತ್ರಚಿಕಿತ್ಸೆಯ ವಿಭಾಗದಲ್ಲಿ ಇತ್ತೀಚೆಗೆ ಇಂತಹ ಜೋಡಿ ಅನ್ನನಾಳ ಇರುವ 2 ಪ್ರಕರಣಗಳು ಕಂಡುಬಂದವು. ಒಂದು 11 ತಿಂಗಳ ಮಗು ಮತ್ತು ಇನ್ನೊಂದು 11 ವರ್ಷದ ಹುಡುಗಿ. 11 ತಿಂಗಳ ಮಗುವಿಗೆ ಮರುಕಳಿಸುವ ಉಸಿರಾಟದ ಸೋಂಕುಗಳು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿತ್ತು. 11 ವರ್ಷದ ಮಗುವಿಗೆ ಇತ್ತೀಚೆಗೆ ಧ್ವನಿಯ ಬದಲಾವಣೆ, ಮಲಗಿರುವ ಸ್ಥಿತಿಯಲ್ಲಿ ಉಸಿರಾಟದ ತೊಂದರೆ ಮತ್ತು ಕುತ್ತಿಗೆಯಲ್ಲಿ ಊತದಂತಹ ಲಕ್ಷಣ ಕಂಡುಬಂದಿತ್ತು. ರೋಗಿಗಳನ್ನು ಎಕ್ಸ್-ರೇ, ಸಿಟಿ ಸ್ಕ್ಯಾನ್ ಮತ್ತು ಎಂಡೋಸ್ಕೋಪಿಕ್ ಮೌಲ್ಯಮಾಪನದ ಮೂಲಕ ಮೌಲ್ಯಮಾಪನ ಮಾಡಲಾಯಿತು. ಸಂಪೂರ್ಣ ಮೌಲ್ಯಮಾಪನದ ನಂತರವೂ, 11 ವರ್ಷದ ರೋಗಿಯಲ್ಲಿನ ಜೋಡಿ ಅನ್ನನಾಳವನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಜೋಡಿ ಅನ್ನನಾಳವನ್ನು ಕಂಡು ಆಶ್ಚರ್ಯವಾಯಿತು.ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಜಯಕುಮಾರ್ ಮತ್ತು ಅವರ ತಂಡದ ಡಾ.ಸಂತೋಷ್ ಪ್ರಭು, ಡಾ.ಸಂದೀಪ್ ಪಿ ಟಿ, ಡಾ.ಹರ್ಷ ಆಚಾರ್ಯ ಮತ್ತು ಡಾ.ರಂಜನಿಯವರ ತಂಡ ಕುತ್ತಿಗೆ ಮತ್ತು ಎದೆಯಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದರ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದು ಹಾಕಿದರು.

ಹೃದಯ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ. ಅರವಿಂದ ಬಿಷ್ಣೋಯಿ, ಒಂದು ರೋಗಿಗೆ ಇಂಟ್ರಾಆಪರೇಟಿವ್ ಆಗಿ ಸಹಾಯ ಮಾಡಿದರು. ಮಕ್ಕಳ ಅರಿವಳಿಕೆ ತಜ್ಞ ಡಾ.ಅಜಿತ್ ಅರಿವಳಿಕೆ ನೀಡಿದರು. ಶಸ್ತ್ರಚಿಕಿತ್ಸೆಯ ನಂತರ ಇಬ್ಬರೂ ರೋಗಿಗಳು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ.

Udupi Express

**27th August 2021**

# ಮಣಿಪಾಲ: ಮಕ್ಕಳಲ್ಲಿ ಕಂಡುಬಂದಿದ್ದ ಜೋಡಿ ಅನ್ನನಾಳದ ಅಪರೂಪದ ಶಸ್ತ್ರಚಿಕಿತ್ಸೆ ನಡೆಸಿದ ಕೆಎಂಸಿ ವೈದ್ಯರು



**ಮಣಿಪಾಲ**: ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಕ್ಕಳ ಶಸ್ತ್ರಚಿಕಿತ್ಸಾ ವಿಭಾಗವು ಎರಡು ಮಕ್ಕಳಲ್ಲಿ ಕಂಡುಬಂದಿದ್ದ ಸಂಕೀರ್ಣ ಮತ್ತು ಅಪರೂಪದ ಜೋಡಿ ಅನ್ನನಾಳದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿತು.

ಒಬ್ಬರಲ್ಲಿ ಎರಡು ಅನ್ನನಾಳಗಳು ಕಂಡುಬರುವುದು ಅತ್ಯಂತ ಅಪರೂಪದ ಜನ್ಮಜಾತ ಭ್ರೂಣದ ವಿರೂಪಗಳು. ಅದರಲ್ಲೂ ಕೊಳವೆಯಾಕಾರದ ಭಾಗದ ಈ ಜೋಡಿ ಅನ್ನನಾಳಗಳು ತೀರ ಅಪರೂಪವಾಗಿದೆ. ಅಂಥವರಿಗೆ ನುಂಗಲು ಕಷ್ಟವಾಗಬಹುದು, ಉಸಿರಾಟದ ತೊಂದರೆ, ಎದೆ ನೋವು, ಎಪಿಗ್ಯಾಸ್ಟ್ರಿಕ್ ಅಸ್ವಸ್ಥತೆ, ವಾಂತಿ, ಸ್ಟ್ರಿಡರ್, ಕೆಮ್ಮು, ರಕ್ತಸ್ರಾವ, ಮತ್ತು ಹೆಮೆಟಮೆಸಿಸ್ ಅಥವಾ ಪ್ರಾಸಂಗಿಕನಂತಹ ತೊಂದರೆಗಳು ಪತ್ತೆಯಾಗಬಹುದು.

ಈ ಪರಿಸ್ಥಿತಿಗಳನ್ನು ನಿರ್ವಹಿಸುವ ಏಕೈಕ ಆಯ್ಕೆಯೆಂದರೆ ಹೆಚ್ಚಿನದನ್ನು ಶಸ್ತ್ರಚಿಕಿತ್ಸೆಯಿಂದ ತೆಗೆಯುವುದು. ಮಣಿಪಾಲ ಮಕ್ಕಳ ಶಸ್ತ್ರಚಿಕಿತ್ಸೆಯ ವಿಭಾಗದಲ್ಲಿ ಇತ್ತೀಚೆಗೆ ಇಂತಹ ಜೋಡಿ

ಅನ್ನನಾಳ ಇರುವ 2 ಪ್ರಕರಣಗಳು ಕಂಡುಬಂದವು. ಒಂದು 11 ತಿಂಗಳ ಮಗು ಮತ್ತು ಇನ್ನೊಂದು 11 ವರ್ಷದ ಹುಡುಗಿ. 11 ತಿಂಗಳ ಮಗುವಿಗೆ ಮರುಕಳಿಸುವ ಉಸಿರಾಟದ ಸೋಂಕುಗಳು ಮತ್ತು ಉಸಿರಾಟದ ತೊಂದರೆ ಕಾಣಿಸಿಕೊಳ್ಳುತ್ತಿತ್ತು. 11 ವರ್ಷದ ಮಗುವಿಗೆ ಇತ್ತೀಚೆಗೆ ಧ್ವನಿಯ ಬದಲಾವಣೆ, ಮಲಗಿರುವ ಸ್ಥಿತಿಯಲ್ಲಿ ಉಸಿರಾಟದ ತೊಂದರೆ ಮತ್ತು ಕುತ್ತಿಗೆಯಲ್ಲಿ ಊತದಂತಹ ಲಕ್ಷಣ ಕಂಡುಬಂದಿತ್ತು.

ರೋಗಿಗಳನ್ನು ಎಕ್ಸ್-ರೇ, ಸಿಟಿ ಸ್ಕ್ಯಾನ್ ಮತ್ತು ಎಂಡೋಸ್ಕೋಪಿಕ್ ಮೌಲ್ಯಮಾಪನದ ಮೂಲಕ ಮೌಲ್ಯಮಾಪನ ಮಾಡಲಾಯಿತು. ಸಂಪೂರ್ಣ ಮೌಲ್ಯಮಾಪನದ ನಂತರವೂ, 11 ವರ್ಷದ ರೋಗಿಯಲ್ಲಿನ ಜೋಡಿ ಅನ್ನನಾಳವನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಜೋಡಿ ಅನ್ನನಾಳವನ್ನು ಕಂಡು ಆಶ್ಚರ್ಯವಾಯಿತು.

ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ವಿಜಯಕುಮಾರ್ ಮತ್ತು ಅವರ ತಂಡದ ಡಾ.ಸಂತೋಷ್ ಪ್ರಭು, ಡಾ.ಸಂದೀಪ್ ಪಿ ಟಿ, ಡಾ.ಹರ್ಷ ಆಚಾರ್ಯ ಮತ್ತು ಡಾ.ರಂಜನಿಯವರ ತಂಡ ಕುತ್ತಿಗೆ ಮತ್ತು ಎದೆಯಭಾಗದಲ್ಲಿ ಶಸ್ತ್ರ ಚಿಕಿತ್ಸೆ ಮಾಡುವುದರ ಮೂಲಕ ಹೆಚ್ಚುವರಿ ಅನ್ನನಾಳವನ್ನು ತೆಗೆದು ಹಾಕಿದರು

ಹೃದಯ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ. ಅರವಿಂದ ಬಿಷ್ಣೋಯಿ, ಒಂದು ರೋಗಿಗೆ ಇಂಟ್ರಾಆಪರೇಟಿವ್ ಆಗಿ ಸಹಾಯ ಮಾಡಿದರು. ಮಕ್ಕಳ ಅರಿವಳಿಕೆ ತಜ್ಞ ಡಾ.ಅಜಿತ್ ಅರಿವಳಿಕೆ ನೀಡಿದರು. ಶಸ್ತ್ರಚಿಕಿತ್ಸೆಯ ನಂತರ ಇಬ್ಬರೂ ರೋಗಿಗಳು ಸಂಪೂರ್ಣವಾಗಿ ಚೇತರಿಸಿಕೊಂಡಿದ್ದಾರೆ.